ದೇವೇಗೌಡರ ೨೫ ಪುಟಗಳ ಪತ್ರಕ್ಕೆ ೧೯ ಪುಟಗಳ ಪ್ರತಿ ಪತ್ರವೊಂದನ್ನು ಮುಖ್ಯಮಂತ್ರಿಗಳಿಗೆ ಬರೆದಿರುವ ಕೃಷ್ಣ, ಪತ್ರ ಮುಖೇನ ಸುಳ್ಳನ್ನು ಎತ್ತಿ

ಪಕ್ಷವನ್ನು ಕಳ ತಗೊಳಿಸಿ ಅದನ್ನು ದುರ್ಬಲಗೊಳಿಸ... ನಿರಂತರ ಪ್ರಯತ್ನ ಮಾಡಲಾಗುತ್ತಿದೆ ಎಂದು ಕೃಷ್ಣ ಹೇಳಿದ್ದಾರೆ.



ಸಸಿ ನೆಡುವ ಕಾರ್ಯಕ್ರಮ ಉದ್ಘಾಟಿಸುತ್ತಿರುವ ಜಿ.ಪಂ. ಅಧ್ಯಕ್ಷ ಎಚ್. ಎಲ್. ಹಿರೇಗೌಡರ.

# ಸಸಿ ನೆಡುವ ಕಾರ್ಯಕ್ರಮ

ಕೊಪ್ಪಳ, ೧೨- ತಾಲೂಕಿನ ಚಿಕ್ಕನಹಳ್ಳಿ ಗ್ರಾಮದಲ್ಲಿ ಸುಸ್ಥಿರ ನೈಸರ್ಗಿಕ ಸಂಪನ್ಮೂಲ ರೈತ ಸಂಘ, ಮಹಿಳಾ ಸ್ವಸಹಾಯ ಸಂಘ ಹಾಗೂ ಸಂಪರ್ಕ ಸಂಸ್ಥೆಯ ಸಹಭಾಗಿತ್ವದಲ್ಲಿ ಇತ್ತೀಚೆಗೆ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಜಿ.ಪಂ. ಅಧ್ಯಕ್ಷ ಹೆಚ್. ಎಲ್. ಹಿರೇಗೌಡರ ನೆರವೇರಿಸಿದರು. ಇದಕ್ಕೂ ಮುನ್ನ ಗ್ರಾಮದ ಶಾಲಾ ಮಕ್ಕಳು ಪರಿಸರ ಸಂರಕ್ಷಣೆಯ ಘೋಷಣೆಗಳನ್ನು ಕೂಗುತ್ತಾ, ಸುಮಾರು ಒಂದು ಸಾವಿರ ಬೇವಿನ ಸಸಿಗಳನ್ನು ನೆಟ್ಟರು.

ಇದೇ ಸಂದರ್ಭದಲ್ಲಿ ಸಾಮಾಜಿಕ ಅರಣ್ಯ ಇಲಾಖೆಯ ಶಿವಬಸಣ್ಣ, ಸಂಪರ್ಕ ಸಂಸ್ಥೆಯ ಯೋಜನಾಧಿಕಾರಿ ಜಯಶೀಲನ್, ಚರಂತಯ್ಯ ಸ್ವಾಮಿಗಳು, ಬಸವರೆಡ್ಡಿ ಬಿಕನಹಳ್ಳಿ, ಸಂಕನಗೌಡ್ರ ಬಿಕನಹಳ್ಳಿ, ಈಶ್ವರಗೌಡ್ರ ಬಿಕನಹಳ್ಳಿ ಹಾಗೂ ಮಹಿಳಾ ಸಂಘದ ಸದಸ್ಯರು, ಶಾಲಾ ಮಕ್ಕಳು ಭಾಗವಹಿಸಿದ್ದರು.